ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	683
ಮಾನ್ಯ ಸದಸ್ಯರ ಹೆಸರು	ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	19-02-2018
ಉತ್ತರಿಸಬೇಕಾದ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿ ವೈದ್ಯರು ಹಣದಾಸೆಯಿಂದಾಗಿ ಗರ್ಭಿಣಿಯರಿಗೆ ಅನಗತ್ಯ ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಸಲಹೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ
ಆ)	ಹಾಗಿದ್ದಲ್ಲಿ, ಗರ್ಭಿಣಿಯರಿಗೆ ಯಾವ ಯಾವ ಸಂದರ್ಭದಲ್ಲಿ ಸಿಸೇರಿಯನ್ ಶಸ್ತ್ರಚಿಕಿತ್ಸೆ ಅನಿವಾರ್ಯ; (ವಿವರ ನೀಡುವುದು)	ಸಿಸೇರಿಯನ್ ಹೆರಿಗೆ ಮಾಡಲು ಇರುವ ಮಾನದಂಡಗಳ ವಿವರ ಈ ಕೆಳಕಂಡಂತಿದೆ. ➢ ಕುಳ್ಳಗಿರುವ ಚೊಚ್ಚಲ ಗರ್ಭಿಣಿ. ➢ ತೀವ್ರರಕ್ತಹೀನತೆ ➢ ಗರ್ಭಿಣಿಯರಲ್ಲಿ ರಕ್ತದೊತ್ತಡ ➢ ಹಿಂದಿನ ಹೆರಿಗೆ ಸಿಜೇರಿಯನ್ ಆದಲ್ಲಿ ➢ ಅವಳಿ / ತ್ರಿವಳಿ ➢ ಅಡ್ಡಡ್ಡವಿರುವ ಭ್ರೂಣ ➢ ಹೆರಿಗೆಯ ಮೊದಲ ರಕ್ತಸ್ರಾವ ➢ ರಕ್ತದ ಗುಂಪಿನಲ್ಲಿ ಹೊಂದಿಕೊಳ್ಳದಿರುವುದು. ➢ ಗರ್ಭಾಶಯದಲ್ಲಿ ಗಡ್ಡೆ ➢ ಹೃದಯದ ಖಾಯಿಲೆ, ಮಧುಮೇಹ ಇತ್ಯಾದಿ ವೈದ್ಯಕೀಯ ಸಮಸ್ಯೆಗಳು. ➢ ಕುಂಠಿತ ಬೆಳವಣಿಗೆಯಿರುವ ಭ್ರೂಣ.
ಇ)	ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಂತೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಪ್ರಮಾಣದ ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಗರ್ಭಿಣಿಯರನ್ನು ಒಳಪಡಿಸಲಾಗಿದೆ (ವರ್ಷಾವಾರು ವಿವರ ನೀಡುವುದು)	ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ 4 ವರ್ಷಗಳಿಗೆ ಒಮ್ಮೆ ಒಂದು ಬಾರಿ ಸಮೀಕ್ಷೆಯ ವರದಿ ನೀಡುತ್ತಾರೆ. ಆ ವರದಿ ಆಧಾರಿತ 2015-16ರ ಸಾಲಿನ ಸಿಸೇರಿಯನ್ ವರದಿ ನೀಡಿರುತ್ತಾರೆ. ಅದರಂತೆ ರಾಜ್ಯದಲ್ಲಿ ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಗರ್ಭಿಣಿಯರ ವಿವರವನ್ನು ಅನುಬಂಧ- 1 ರಲ್ಲಿ ನೀಡಲಾಗಿದೆ.
ಈ)	ಅನಗತ್ಯ ಸಿಸೇರಿಯನ್ ಶಸ್ತ್ರ ಚಿಕಿತ್ಸೆಯನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಅನಗತ್ಯ ಸಿಸೇರಿಯನ್ ಶಸ್ತ್ರ ಚಿಕಿತ್ಸೆಯನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳು: • ಕೂಲಂಕಷವಾಗಿ ಕಾರಣಗಳನ್ನು ತಿಳಿಯಲು ಸಮಿತಿಯನ್ನು ರಚಿಸಲಾಗುವುದು. • ಈ ಸಮಿತಿಯಲ್ಲಿ ಸರ್ಕಾರಿ ಮತ್ತು ಖಾಸಗಿ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು, IMA ಪ್ರತಿನಿಧಿಗಳು ಮತ್ತು KSOGA ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ.

		• ಈ ಸಮಿತಿಯು ಕಳೆದ ಮೂರು ವರ್ಷಗಳಲ್ಲಿ ಸಿಜೇರಿಯನ್ ಪ್ರಕರಣಗಳು ಹೆಚ್ಚುತ್ತಿರುವ ಆಸ್ಪತ್ರೆಗಳಿಗೆ ಭೇಟಿ ನೀಡಿ ಕಾರಣಗಳನ್ನು ಪರಿಶೀಲಿಸುವುದು. • ಅನಗತ್ಯ ಶಸ್ತ್ರಚಿಕಿತ್ಸೆಗಳು ಆಸ್ಪತ್ರೆಗಳಲ್ಲಿ ನಡೆಯುತ್ತಿವೆ ಎಂದು ತಿಳಿದು ಬಂದಲ್ಲಿ ಕೆಪಿಎಂಇ ಆಕ್ಟ್ ಅಡಿಯಲ್ಲಿ ವಿಚಾರಣೆ ನಡೆಸಿ ಅಂತಹ ಆಸ್ಪತ್ರೆಯ ನೋಂದಣಿಯನ್ನು ರದ್ದುಪಡಿಸಲಾಗುವುದು.
ಉ)	ಇದರ ನಿರ್ವಹಣೆ ಮಾಡುವವರು ಯಾರು; ಹೇಗೆ ನಿರ್ವಹಿಸುವರು? (ವಿವರ ನೀಡುವುದು)	ಸಿಸೇರಿಯನ್ ಶಸ್ತ್ರಚಿಕಿತ್ಸೆಯನ್ನು ನಿಯಂತ್ರಿಸಲು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ಮತ್ತು ಉಪ ನಿರ್ದೇಶಕರು (ತಾಯಿ ಆರೋಗ್ಯ) ಇವರು ನಿರ್ವಹಣೆ ಮಾಡುತ್ತಿರುತ್ತಾರೆ. • ಸಮಿತಿಯನ್ನು ರಚಿಸಿ ಪ್ರತಿ 3 ತಿಂಗಳಿಗೊಮ್ಮೆ ಸಮಿತಿಯ ವರದಿಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು. • ತಪ್ಪಿತಸ್ಥ ಖಾಸಗಿ ವೈದ್ಯರು ಮತ್ತು ಆಸ್ಪತ್ರೆಗಳ ವಿರುದ್ಧ ಕೆ.ಪಿ.ಎಂ.ಇ ಆಕ್ಟ್ ಅಡಿಯಲ್ಲಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳುರವರಿಗೆ ವರದಿ ಸಲ್ಲಿಸುವುದು.

ಕಡತ ಸಂಖ್ಯೆ: ಆಕುಕ 14 ಎಸ್‌ಟಿಕ್ಯೂ 2018

(ಕೆ.ಆರ್. ರಮೇಶ್ ಕುಮಾರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ - 1 USQ 683 (10)

ಸಿಸೇರಿಯನ್ ಶಸ್ತ್ರಚಿಕಿತ್ಸೆಯ 2015-16 (%) ರ ವಿವರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-4 ಆಧಾರಿತ			
ಕ್ರಸಂ	ಜಿಲ್ಲೆಯ ಹೆಸರು	% ಸಿಸೇರಿಯನ್ ಶಸ್ತ್ರಚಿಕಿತ್ಸೆ ಖಾಸಗಿ ಆಸ್ಪತ್ರೆ	% ಸಿಸೇರಿಯನ್ ಶಸ್ತ್ರಚಿಕಿತ್ಸೆ ಸಾರ್ವಜನಿಕ ಆಸ್ಪತ್ರೆ
1	ಬಾಗಲಕೋಟೆ	29.3	7.1
2	ಬೆಂಗಳೂರು ಗ್ರಾಮಾಂತರ	45	23
3	ಬೆಂಗಳೂರು ನಗರ	35.7	21.4
4	ಬೆಳಗಾವಿ	38.3	7.7
5	ಬಳ್ಳಾರಿ	54	18.2
6	ಬೀದರ್	31.4	15.8
7	ಬಿಜಾಪುರ	40.7	8.5
8	ಚಾಮರಾಜನಗರ	48.6	11.5
9	ಚಿಕ್ಕಬಳ್ಳಾಪುರ	51	18.8
10	ಚಿಕ್ಕಮಗಳೂರು	63.2	34.9
11	ಚಿತ್ರದುರ್ಗ	58.7	21
12	ದಕ್ಷಿಣ ಕನ್ನಡ	30.5	29
13	ದಾವಣಗೆರೆ	48.6	20.5
14	ಧಾರವಾಡ	39.9	12
15	ಗದಗ	44.4	26.1
16	ಕಲಬುರಗಿ	16.5	5.4
17	ಹಾಸನ	51.8	21
18	ಹಾವೇರಿ	53.1	11.3
19	ಕೊಡಗು	39.4	20.2
20	ಕೋಲಾರ	47	25.4
21	ಕೊಪ್ಪಳ	47.9	5.7
22	ಮಂಡ್ಯ	50.7	24.4
23	ಮೈಸೂರು	64.9	24.5
24	ರಾಯಚೂರು	35.3	6.5
25	ರಾಮನಗರ	43	20.5
26	ಶಿವಮೊಗ್ಗ	29.2	32.9
27	ತುಮಕೂರು	54.1	23.6
28	ಉಡುಪಿ	58	28.9
29	ಉತ್ತರ ಕನ್ನಡ	27.1	10.6
30	ಯಾದಗಿರಿ	25.8	4.8
	ಕರ್ನಾಟಕ	**40.3**	**16.9**